ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ: ಸಿಡಿಸಿ-3/169/ಸಂಯೋಜನೆ/ಪ.ಪ್ರ/24-25/2018-19 ದಿನಾಂಕ 18.10.2024

## ಸಂಯೋಜನಾ ಪ್ರಕಟಣೆ

**ವಿಷಯ : 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗಾಗಿ UUCMS ಮುಖಾಂತರ ಅರ್ಜಿಯನ್ನು ಸಲ್ಲಿಸುವ ಬಗೆಗೆ.**

**ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಇಡಿ 212 ಯುಎನ್ಇ 2024, ಬೆಂಗಳೂರು, ದಿನಾಂಕ 04.10.2024**

* * * * *

ಸರ್ಕಾರದ ಉಲ್ಲೇಖಿತ ಆದೇಶದಂತೆ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು 2025-26ನೇ ಶೈಕ್ಷಣಿಕ ವರ್ಷದಲ್ಲಿ ತಮ್ಮ ಕಾಲೇಜುಗಳ ಸ್ನಾತಕ ಪೂರ್ವ ಹಾಗೂ ಸ್ನಾತಕೋತ್ತರ ಕೋರ್ಸುಗಳ ತಾತ್ಕಾಲಿಕ ಸಂಯೋಜನೆ ನವೀಕರಿಸಲು/ ಹೊಸ ಕೋರ್ಸ್/ ವಿಷಯ/ ಭಾಷೆಗಳು/ವಿದ್ಯಾರ್ಥಿಗಳ ಪ್ರವೇಶಾತಿ/ ಹೆಚ್ಚುವರಿ/ ಇಳಿಕೆ ಪ್ರವೇಶಾತಿ ಮಿತಿ, ಈಗಿರುವ ತಾತ್ಕಾಲಿಕ ಸಂಯೋಜನೆಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಲು/ ಹೊಸ ಕಾಲೇಜು ಆರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಕೋರಲು **ಅರ್ಜಿಯನ್ನು ಆನ್‌ಲೈನ್ (website ವಿಳಾಸ: UUCMS.karnataka.gov.in) ಮುಖಾಂತರ ಆಹ್ವಾನಿಸಲಾಗಿದೆ. (ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ).**

1. ನೋಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ ಸಂಸ್ಥೆಗಳವರು ಮಾತ್ರ ಹೊಸದಾಗಿ ಪ್ರಥಮ ದರ್ಜೆ ಕಾಲೇಜನ್ನು ಕನಿಷ್ಠ ಎರಡು ಪ್ರತ್ಯೇಕ ಕೋರ್ಸ್‌ಗಳೊಡನೆ ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಬೇಕು.

2. ಐದು ವರ್ಷಗಳ ನಿರಂತರ ತಾತ್ಕಾಲಿಕ ಸಂಯೋಜನೆಯನ್ನು ಪಡೆದು, ಅಸ್ತಿತ್ವದಲ್ಲಿರುವ ಕೋರ್ಸು/ವಿಷಯಗಳಿಗೆ ಸ್ಥಳೀಯ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿ, ಉತ್ತಮ ಶೈಕ್ಷಣಿಕ ಗುಣಮಟ್ಟ ಹೊಂದಿದ್ದು, ನ್ಯಾಕ್ ಸಂಸ್ಥೆಯ ಮಾನ್ಯತೆ (ಕನಿಷ್ಠ C Grade) ಹೊಂದಿರುವಂತಹ ಕಾಲೇಜಿನವರು ಸದರಿ ಕೋರ್ಸು/ವಿಷಯಗಳಿಗೆ ಶಾಶ್ವತ ಸಂಯೋಜನೆ ಮಂಜೂರಾತಿ ಕೋರುವುದು (ಖಾಸಗಿ ಕಾಲೇಜುಗಳು ನಿಗದಿತ ಶುಲ್ಕ ಪಾವತಿಸಬೇಕಾಗುತ್ತದೆ)

3. ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕಾಲೇಜುಗಳು ಹಾಗೂ ಸರ್ಕಾರದ ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪತ್ರ ಸಂಖ್ಯೆ (1) ಇಡಿ 99 ಯುಎನ್ಇ 2002, ದಿನಾಂಕ 02.11.2002 (2) ಇಡಿ 107 ಯುಆರ್‌ಸಿ 2006 ದಿನಾಂಕ 21.08.2006 ರಲ್ಲಿ ತಿಳಿಸಿರುವಂತೆ ನಿರಂತರ ಐದು ವರ್ಷ ಸಂಯೋಜನೆ ಪೂರೈಸಿ, ಸ್ನಾತಕೋತ್ತರ ಕೋರ್ಸಿಗೆ ಸಂಬಂಧಿಸಿದ ವಿಷಯದಲ್ಲಿ ಕನಿಷ್ಠ ನಾಲ್ಕು ಜನ ಅರ್ಹ ಬೋಧಕರನ್ನು ಹೊಂದಿದ್ದು (ಅವರಲ್ಲಿ ಇಬ್ಬರು Ph.D. ಹೊಂದಿರಬೇಕು) ಮತ್ತು ಸಂಶೋಧನೆ ಕಾರ್ಯಕ್ಕಾಗಿ ಪ್ರತ್ಯೇಕ ವ್ಯವಸ್ಥೆಯ ಮೂಲಭೂತ ಸೌಲಭ್ಯ ಹೊಂದಿರುವ ಕಾಲೇಜುಗಳವರು 2025-26ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸಬೇಕು. **ಹಾಲಿ ಅಸ್ತಿತ್ವದಲ್ಲಿರುವ ಎಂ.ಬಿ.ಎ. & ಎಂ.ಸಿ.ಎ. ಕೋರ್ಸ್‌ಗಳಿಗೆ ಸಂಯೋಜನೆ ನವೀಕರಣಗೊಳಿಸಲು ಎ.ಐ.ಸಿ.ಟಿ.ಇ./ಯು.ಜಿ.ಸಿ./ರಾಜ್ಯ ಸರ್ಕಾರದ ನಿಯಮಾವಳಿಯನ್ನು ಅನುಸರಿಸುವ ಷರತ್ತಿಗೆ ಒಳಪಟ್ಟಿರಬೇಕು.**

ಪು.ತಿ.ನೋ.

4. ಬಿ.ಎಡ್. ಕಾಲೇಜನ್ನು ಪ್ರಾರಂಭಿಸಲು **ಎನ್.ಸಿ.ಟಿ.ಇ.ಯಿಂದ ಮಾನ್ಯತೆ** ಪಡೆದಂತಹ ನೋಂದಾಯಿತ ಸಂಸ್ಥೆಗಳು ಮಾತ್ರ ಹೊಸ ಬಿ.ಎಡ್. ಬಿ.ಪಿ.ಎಡ್., ಬಿ.ಎ.ಎಡ್., ಬಿ.ಎಸ್ಸಿ.ಎಡ್. ಕೋರ್ಸ್‌ಗಳನ್ನು ನಡೆಸುವಂತಹ ಸಂಸ್ಥೆಯವರು ಎಂ.ಎಡ್., ಎಂ.ಪಿ.ಎಡ್., ಎಂ.ಎಸ್ಸಿ.ಎಡ್. ಸ್ನಾತಕೋತ್ತರ ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಬಹುದು.
5. ಯು.ಜಿ.ಸಿ., ಸರ್ಕಾರ ಹಾಗೂ ವಿಶ್ವವಿದ್ಯಾನಿಲಯ ಸಂಯೋಜನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ನೀತಿ ಸಂಹಿತೆಗಳನ್ನು / ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
6. ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮಾವಳಿಯನ್ವಯ ಕೋರ್ಸ್/ವಿಷಯ/ಐಚ್ಛಿಕ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಪರಿನಿಯಮಾವಳಿಯಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕೋರ್ಸ್/ವಿಷಯ/ಐಚ್ಛಿಕ ವಿಷಯಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಸರ್ಕಾರದ ಆದೇಶಾನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಕಾಲೇಜುಗಳು ನಿಗದಿತ ಸಂಯೋಜನಾ ಶುಲ್ಕದಲ್ಲಿ ಶೇಕಡಾ 50ರಷ್ಟು ಮಾತ್ರ ಪಾವತಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅಂತಹ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಶೇ.50ರ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.
8. **ಅರ್ಜಿಯನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 570005 ಇವರ ಹೆಸರಲ್ಲಿ ಹಾರ್ಡ್ ಕಾಪಿಯನ್ನು – ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಬೋಗಾದಿ ರಸ್ತೆ, ಮಾನಸಗಂಗೋತ್ರಿ, ಮೈಸೂರು 570 006 ಇವರಿಗೆ ಸಲ್ಲಿಸುವುದು.**

ಅರ್ಜಿಗಳನ್ನು ಈ ಕೆಳಕಂಡ ದಿನಾಂಕದೊಳಗೆ ಸಲ್ಲಿಸತಕ್ಕದ್ದು

**ದಿನಾಂಕ 25.10.2024 ರಿಂದ 15.11.2024 ರೊಳಗೆ ಸಲ್ಲಿಸುವುದು.**

**ಹೊಸ ಕಾಲೇಜನ್ನು ಪ್ರಾರಂಭಿಸಲಿಚ್ಛಿಸುವ ಸಂಘ ಸಂಸ್ಥೆಗಳವರು ಅರ್ಜಿಯೊಡನೆ ಈ ಕೆಳಕಂಡ ಮಾಹಿತಿಗಳನ್ನು ತಪ್ಪದೆ ಲಗತ್ತಿಸತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗೆ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಸಂಪರ್ಕಿಸುವುದು**

1. ವಿದ್ಯಾಸಂಸ್ಥೆಯ ನೋಂದಣಿ ದೃಢೀಕೃತ ಪ್ರತಿ
2. ಮೆಮೊರಾಂಡಮ್ ಆಫ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ರೂಲ್ಸ್, ರೆಗ್ಯುಲೇಶನ್ಸ್ ಮತ್ತು ಬೈಲಾ ಪ್ರತಿ
3. ಟ್ರಸ್ಟ್ ಆಗಿದ್ದರೆ ಆ ಟ್ರಸ್ಟ್ ಡೀಡ್‌ನ ಒಂದು ಪ್ರತಿ ಹಾಗೂ ಸಂಬಂಧಪಟ್ಟ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುವುದಕ್ಕೆ ದೃಢೀಕೃತ ಪ್ರತಿ ಮತ್ತು ಶೈಕ್ಷಣಿಕ ಉಪಯೋಗಕ್ಕೆ ಸಂಬಂಧಪಟ್ಟಂತೆ ಟ್ರಸ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿ
4. ಸೊಸೈಟಿ/ಟ್ರಸ್ಟ್ ಲೆಕ್ಕಗಳ ಆಡಿಟ್ ವರದಿಯ ಪ್ರತಿ
5. ಕಾಲೇಜಿನ ಲೆಕ್ಕಗಳ ಆಡಿಟ್ ವರದಿ ಪ್ರತಿ
6. ಹಿಂದಿನ ವರ್ಷದ ವಾರ್ಷಿಕ ವರದಿಯ ಪ್ರತಿ
7. ಕಾಲೇಜನ್ನು ಸ್ಥಾಪಿಸಬೇಕೆಂದಿರುವ ಸ್ಥಳ ಮತ್ತು ಅದರ ಸೂಕ್ತತೆ ವಿವಾದ ಮುಕ್ತವಾಗಿರುವ ಬಗೆಗೆ ಮುಚ್ಚಳಿಕೆ ಪ್ರತಿ
8. ಪ.ಜಾ/ಪ.ಪಂಗಡದ ಆಡಳಿತ ಮಂಡಳಿಯವರು ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣಪತ್ರ.
9. ಕಾಲಕಾಲಕ್ಕೆ ರಚಿಸಿರುವ / ರಚಿಸಲಾಗುವ ವಿಶ್ವವಿದ್ಯಾನಿಲಯದ ಅಧಿನಿಯಮ (Act) ಪರಿನಿಯಮ/ಶಾಸನ (Statutes); ನಿಬಂಧನೆ (Regulations) ಅಧ್ಯಾದೇಶ (Ordinance); ನಿಯಮ (Rules) ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವುದಾಗಿ ತಿಳಿಸುವ ಮುಚ್ಚಳಿಕೆ ಪತ್ರ (Undertaking Part-'c')ವನ್ನು 100 ರೂ. ಛಾಪ ಕಾಗದದಲ್ಲಿ ಮುದ್ರಿಸಿ ನೋಟರಿರವರಿಂದ ದೃಢೀಕರಿಸಿ ಲಗತ್ತಿಸುವುದು.
10. ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರು ಬಗ್ಗೆ ಸಬ್‌ರಿಸ್ಟ್ರರ್ ಕಛೇರಿಯಲ್ಲಿ ನೊಂದಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ.
11. ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡತಕ್ಕದ್ದು.
12. ಅಗ್ನಿ ಸುರಕ್ಷತೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

Cont......

ನಿಗದಿತ ಅರ್ಜಿ ಸಲ್ಲಿಸಬೇಕಾದ ಸಂಯೋಜನಾ ಶುಲ್ಕದ ವಿವರ / ಸಂಯೋಜನೆಗೆ ಸಂಬಂಧಪಟ್ಟ ನಿಯಮಗಳನ್ನು ಕಛೇರಿಯ ವೇಳೆಯಲ್ಲಿ **ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಕಛೇರಿ, ಮೌಲ್ಯಭವನ, ಬೋಗಾದಿ ರಸ್ತೆ, ಮಾನಸಗಂಗೋತ್ರಿ, ಮೈಸೂರು 570 006** (ದೂರವಾಣಿ ಸಂಖ್ಯೆ 2419306/415 ಇ.ಮೇಲ್ ವಿಳಾಸ cdc@uni-mysore.ac.in) ಇವರಿಂದ ಪಡೆದುಕೊಳ್ಳಬಹುದಾಗಿದೆ.

**ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಸಂಬಂಧಿಸಿದಂತೆ, ಸಂಯೋಜನಾ ಶುಲ್ಕದ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್** www.uni-mysore.ac.in **ಅನ್ನೂ ನೋಡಬಹುದು.**

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಪಡೆದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು/ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರುಗಳು
2. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ
3. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ/ತಾಂತ್ರಿಕ ಶಿಕ್ಷಣ ಇಲಾಖೆ/ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ, ಬೆಂಗಳೂರು 560 001
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು 560 001
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು 560 003
7. ನಿರ್ದೇಶಕರು, ಎನ್.ಸಿ.ಟಿ.ಇ., ಬೆಂಗಳೂರು
8. ನಿರ್ದೇಶಕರು / ಕಾರ್ಯದರ್ಶಿ, ಎ.ಐ.ಸಿ.ಟಿ.ಇ./ ಬಾರ್ ಕೌನ್ಸಿಲ್ ಆಫ್ ಇಂಡಿಯಾ, ಬೆಂಗಳೂರು / ನವದೆಹಲಿ.
9. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಮೈಸೂರು/ ಬೆಂಗಳೂರು/ ಮಂಗಳೂರು/ ಶಿವಮೊಗ್ಗ/ ಧಾರವಾಡ ಮತ್ತು ಗುಲ್ಬರ್ಗಾ
10. ಕುಲಸಚಿವರು (ಪರೀಕ್ಷಾಂಗ) / ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
11. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
12. ಸರ್ಕಾರಿ ಲೆಕ್ಕ ಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
13. ಪ್ರೊ. ಸುರೇಶ್, ಅಧ್ಯಕ್ಷರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು 06 –ವಿಶ್ವವಿದ್ಯಾನಿಲಯದ ವೆಬ್‌ಸೈಟಿನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
14. ಉಪಕುಲಸಚಿವ/ಸಹಾಯಕ ಕುಲಸಚಿವ (ಸಾಮಾನ್ಯ/ ಪ್ರಾಧಿಕಾರ/ ಶೈಕ್ಷಣಿಕ/ ಅಭಿವೃದ್ಧಿ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
15. ಕುಲಪತಿಗಳ/ ಕುಲಸಚಿವರ/ ಕುಲಸಚಿವ (ಪರೀಕ್ಷಾಂಗ) ಅವರ/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
16. ಸಂಪಾದಕರು, ವಿಶ್ವವಿದ್ಯಾನಿಲಯ ಗೆಜೆಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
17. ಅಧೀಕ್ಷಕರು/ಎಲ್ಲಾ ಕಾರ್ಯನಿರ್ವಾಹಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
18. ರಕ್ಷಾ ಕಡತಕ್ಕೆ/ಕಛೇರಿ ಪ್ರತಿ